# ಮೇಣದ ಹೂಗಳ ಬಳ್ಳಿ

**ಬಿದಿರಿನ ಚಪ್ಪರದ ಮೇಲೆ ಹಬ್ಬಿಸುವ ಈ ಬಳ್ಳಿ ಮನೆಯಂಗಳಕ್ಕೆ ವಿಶಿಷ್ಟ ಶೋಭೆ ತರುತ್ತದೆ.**

ಚಿತ್ರ ಬರಹ:
**ಡಾ.ಎಂ.ವಸುಂಧರ**

ದಕ್ಷಿಣ ಚೀನಾ ಮತ್ತು ಆಸ್ಟ್ರೇಲಿಯಾ ಮೂಲದ ಈ ಬಳ್ಳಿ (ಹೋಯಾ ಕಾರ್ನೋಸ) ಮೇಣದ ಹೂವಿನಂತೆಯೇ ಕಂಡು ಬರುವುದರಿಂದ ಈ ಹೆಸರು. ಇದು ಬಹಳ ಹಗುರವಾದ ಬಳ್ಳಿ. ಆಸರೆ ಬೇಕೇ ಬೇಕು. ಹೊಳೆಯುವ ದಟ್ಟ ಹಸಿರಿನಿಂದ ಅಂಡಾಕಾರದ ಎಲೆಗಳು. ಎಲೆಗಳು ಮೇಣದಿಂದ ಮಾಡಿರುವಂತೆ ಕಂಡುಬರುತ್ತದೆ. ಪ್ಲಾಸ್ಟಿಕ್/ ಮಣ್ಣಿನ ಕುಂಡಗಳಲ್ಲೂ ಬೆಳೆಯಬಹುದು. ಬಿದಿರಿನ ಚಪ್ಪರಗಳ ಮೇಲೂ ಹಬ್ಬಿಸಬಹುದು. ಮರಗಳ ಬುಡಗಳನ್ನು ಕಾಣದಂತೆ ಮಾಡಲು ಅಥವಾ ಕಲ್ಲು ಕಂಬಗಳ ಮೇಲೆ ಅಥವಾ ಕಬ್ಬಿಣದ ಕಮಾನುಗಳ ಮೇಲೆ ಹಬ್ಬಿಸಿದರೆ ಅಂದವಾಗಿ ಕಾಣುತ್ತದೆ.

ಆಸ್ಲೆಪಿಯಡೇಸಿ ಕುಟುಂಬವು ಅನೇಕ ಔಷಧಿ ಗಿಡಗಳಿಗೆ ಹೆಸರಾದದ್ದು. (ಉದಾಹರಣೆಗೆ: ಕಾಗೆ ತೊಂಡೆ, ಮಧುನಾಶಿನಿ, ಈಶ್ವರಿ ಬಳ್ಳಿ) ಹೋಯಾ ಬಳ್ಳಿಯೂ ಈ ಕುಟುಂಬಕ್ಕೆ ಸೇರಿದ್ದು. ಈ ಬಳ್ಳಿಯನ್ನು ನೆರಳಿನಲ್ಲಿ ಬೆಳೆಯುವುದರಿಂದ ಎಲೆಗಳು ದಟ್ಟವಾದ ಬಣ್ಣದಿಂದ ಕೂಡಿ ಹೊಳಪನ್ನೂ ಉಳಿಸಿಕೊಳ್ಳುತ್ತವೆ. ಈ ಬಳ್ಳಿಯ ಸಸ್ಯಶಾಸ್ತ್ರೀಯ ಹೆಸರು ಹೋಯಾ ಕಾರ್ನೋಸ. ನೀರು ನಿಲ್ಲದ ಮಣ್ಣು ಈ ಬಳ್ಳಿಗೆ ಅತ್ಯಂತ ಸೂಕ್ತ. ಈ ಬಳ್ಳಿಗೆ ತಿಪ್ಪೆಗೊಬ್ಬರ ಅಥವಾ ಎರೆಗೊಬ್ಬರ ನೀಡುತ್ತಿದ್ದರೆ ಸಾಕು.

ಸಾಮಾನ್ಯವಾಗಿ ಮಾರ್ಚ್– ಏಪ್ರಿಲ್ ಹಾಗೂ ಸೆಪ್ಟೆಂಬರ್– ಅಕ್ಟೋಬರ್ ತಿಂಗಳಲ್ಲಿ ಹೂಗಳು ಕಂಡುಬರುತ್ತದೆ. ಹೂಗಳು ಸುವಾಸನಯುಕ್ತವಾಗಿದ್ದು ಅತ್ಯಂತ ಮನಮೋಹಕವಾಗಿರುತ್ತವೆ. ಈ ಕುಟುಂಬದ ಗಿಡಗಳಲ್ಲಿ, ಗಿಡಗಳಿಗೆ ಘಾಸಿಯಾದರೆ ಹಾಲಿನ ತರಹದ ಒಂದು ಅಂಟುದ್ರವ ಸ್ರವಿಸುತ್ತದೆ.

ಹೂಗಳು ಬಿಟ್ಟ ತರುವಾಯ ಬಳ್ಳಿಯನ್ನು ಸವರುವ ಕೆಲಸ ಮಾಡಬಾರದು. ಹಳೆಯ ರೆಂಬೆಗಳ ಮೇಲೆಯೇ ಮತ್ತೆ ಹೂಗಳು ಮೂಡುವುದರಿಂದ ಹೆಚ್ಚಿನ ಸವರುವಿಕೆ ಅಗತ್ಯವಿಲ್ಲ. ಹಾಗೆಯೇ ಬಿಟ್ಟಾಗ ಹೂಗಳು ಮೇಣದ ಬತ್ತಿಗಳನ್ನು ಜೋಡಿಸಿದಂತೆ ಕಾಣುತ್ತವೆ. ಈ ಬಳ್ಳಿಯನ್ನು ಕಾಂಡದ ತುಂಡುಗಳಿಂದ ಅಥವಾ ನಾಟಿ ಮಾಡುವುದರಿಂದ ವೃದ್ಧಿಸಬಹುದು. ದಟ್ಟವಾದ ನೆರಳಿನಲ್ಲೂ ಬೆಳೆದು ಸುಂದರವಾದ ಹೂ ನೀಡುವ ಬಳ್ಳಿ ಹೋಯಾ.

